CC 33/2024
PW-1 Dated:18-02-2026.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎಸ್ ಬಿ ಎಂ ವಕೀಲರಿಂದ:

ನಾನು ಪಿ ಯು ಸಿ 2 ನೇ ವರ್ಷದ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಒಕ್ಕಲುತನ ಮತ್ತು ವ್ಯಾಪಾರ ಎರಡೂ ಮಾಡುತ್ತೇನೆ ಎಂದರೆ ಸರಿ. ನನ್ನ ಮಗನ ಒಂದು ಟ್ರಾಕ್ಟರ್ ಇದೆ ಎಂದರೆ ಸರಿ. ಆರೋಪಿತನು ಕಲ್ಲಿನ ಕ್ವಾರಿ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. ಅವರು ಕಲ್ಲು ಮಾರಾಟ ಮಾಡುವುದು ಮಾಡುತ್ತಾರೆ ಎಂದರೆ ಸರಿ. ಆರೋಪಿತನ ಬಳಿ ಒಂದು ಕಾರು ಇದೆ ಎಂದರೆ ಸರಿ. ಆರೋಪಿತನ ಕಲ್ಲಿನ ಕ್ವಾರಿ ದಿಂದ ಕಲ್ಲುಗಳನ್ನು ತೆಗೆದುಕೊಂಡು ನಾನು ಬೆರೆಯವರಿಗೆ ಮಾರುತ್ತೇನೆ ಎಂದರೆ ಸರಿಯಿಲ್ಲ. ಆರೋಪಿಯ ಕಲ್ಲುಗಳು ನನ್ನ ಟ್ರಾಕ್ಟರ್ ಮುಖಾಂತರ ಬೇರೆಯವರಿಗೆ ಮಾರಟ ಮಾಡುತ್ತೇನೆ ಎಂದರೆ ಸರಿಯಿಲ್ಲ. ನನಗೆ ನಡೆಯಲು ಆಗದೇ ಇರುವುದರಿಂದ ನಾನು ಆರೋಪಿಯ ಕಾರಿನಲ್ಲಿ ಹೋಗುವುದು ಬರುವುದು ಮಾಡುತ್ತಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿಯ ಕಲ್ಲಿನ ಗಣಿಯಿಂದ ಕಲ್ಲನ್ನು ತೆಗೆದುಕೊಂಡು ಅವುಗಳನ್ನು ಮಾರಾಟ ಮಾಡಿ ನನ್ನ ಶೇಕಡಾವಾರಿ ಪಡೆದುಕೊಂಡು ಇನ್ನುಳಿದ ಹಣವನ್ನು ಆರೋಪಿಗೆ ನೀಡುತ್ತಿದ್ದೆನು ಎಂದರೆ ಸರಿಯಿಲ್ಲ. ಸದರಿ ವ್ಯಾಪಾರ 8 ರಿಂದ 10 ವರ್ಷಗಳ ಕಾಲ ಸರಿಯಾಗಿ ನಡೆಸಿದೆವು ಎಂದರೆ ಸರಿಯಿಲ್ಲ. ನಾನು ಸುಮಾರು ರೂ.2,71,000/- ಗಳನ್ನು ನಾನು ಆರೋಪಿಗೆ ಕೊಡಬೇಕಾಗಿತ್ತು ಎಂದರೆ ಸರಿಯಿಲ್ಲ. ಆರೋಪಿತನು ಸಾಕಷ್ಟು ಭಾರಿ ಸದರಿ ಹಣ ಕೇಳಿದರು ಅದಕ್ಕೆ ನಾನು ಹಲವಾರು ಭಾರಿ ಕೊಡುತ್ತೇನೆ ಅಂತಾ ಸತಾಯಿಸಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿಯು ಪದೇ ಪದೇ ಹಣವನ್ನು ಕೇಳಿದಾಗ ನಾನು ಅವರೊಂದಿಗೆ ವ್ಯಾಪಾರ ಬಂದ್ ಮಾಡಿದ್ದೇನೆ ಎಂದರೆ ಸರಿಯಿಲ್ಲ. 2 ವರ್ಷಗಳ ಹಿಂದೆ ಆರೋಪಿ ಕಾರಿನಿಂದ ಮೂರು ಚಕ್ರಗಳು ಕಳ್ಳತನವಾಗಿತ್ತು ಹಾಗೂ ಅದರ ಬಗ್ಗೆ ಕುರುಕುಂಟಾ ಪೊಲೀಸ್ ಠಾಣೆಯಲ್ಲಿ ಪಿರ್ಯಾದಿ ಕೂಡ ನೀಡಿದ್ದಾರೆ ಎಂದರೆ ಸರಿಯಿಲ್ಲ. ಆ ಮೂರು ಚಕ್ರಗಳಲ್ಲಿ ಈ ಒಂದು ಚಕ್ರವಾಗಿದೆ ಎಂದರೆ ಸರಿಯಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಸ್ವಲ್ಪ ವೈಷಮ್ಯ ಉಂಟಾಗಿ ನಾನು ಚಕ್ಕಿನಲ್ಲಿ ಜಾಸ್ತಿ ಹಣವನ್ನು ಹಾಕಿ ನಾನೇ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಿಲ್ಲ. ನಿ ಪಿ 1 ಚಕ್ಕಿನಲ್ಲಿ ನಾನೇ ದಿನಾಂಕ ಮತ್ತು ಹಣವನ್ನು ತುಂಬಿರುತ್ತೇನೆ ಎಂದರೆ ಸರಿಯಿಲ್ಲ. ನನ್ನ ಬ್ಯಾಂಕ್ ಖಾತೆ ಕುರುಕುಂಟಾ ಮತ್ತುಸುಲೇಪೇಟ್ ಎಸ್ ಬಿ ಐ ಶಾಖೆಯಲ್ಲಿ ಇರುತ್ತವೆ. ನಾನು ಕೊಟೆಕ್ ಬ್ಯಾಂಕ್ ಸುಲೇಪೇಟೆಗೆ ಚಕ್ಕನ್ನು ಜಮಾ ಮಾಡಿದ್ದೇನೆ ಕಾರಣನನ್ನ ವ್ಯವಹಾರ ಅದೇ ಶಾಖೆಯಲ್ಲಿ ಇತ್ತು ಎಂದು ನುಡಿಯುತ್ತಾರೆ. ನಿ ಪಿ 1 ಚಕ್ಕು ನಕಲಿ ಚಕ್ಕು ಇರುವುದರಿಂದ ಕುರುಕುಂಟಾ ಶಾಖೆಯಲ್ಲಿ ಹಾಕದೇ ಸುಲೇಪೇಟೆ ಶಾಖೆಯಲ್ಲಿ ಹಾಕಿದ್ದೇನೆ ಎಂದರೆ ಸರಿಯಿಲ್ಲ. ದಿ. 02-09-2023 ರಂದು ಚಕ್ಕನ್ನು ಜಮಾ

ಮಾಡಿರುತ್ತೇನೆ. ಬ್ಯಾಂಕ್ ನವರು ನನಗೆ 10 ರಿಂದ 15 ದಿನ ಬಿಟ್ಟು ಮಾಹಿತಿ ನೀಡಿ ಕಲಬುರಗಿ ಶಾಖೆಯಲ್ಲಿ ಜಮಾ ಮಾಡಲು ತಿಳಿಸಿರುತ್ತಾರೆ. ಸಾಕ್ಷಿಯು ಮುಂದುವರೆದು ಅಲ್ಲಿ ಹಣ ಇಲ್ಲ ಎಂದು ಹೇಳಿದ್ದಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಿಲ್ಲ. ನಿ ಪಿ 2 ಬ್ಯಾಂಕಿನವರು ನೀಡಿದ ಹಿಂಬರಹದಲ್ಲಿ ಚಕ್ಕು ನಂಬರು ಸರಿಯಾಗಿ ಇರುತ್ತದೆ ಆದರೆ ಅಕೌಂಟ್ ನಂಬರು ಆರೋಪಿಗೆ ಸಂಬಂದ ಇಲ್ಲ ಎಂದರೆ ಸರಿಯಿಲ್ಲ. ನಿ ಪಿ 2 ರಲ್ಲ ಇರುವ ಅಕೌಂಟ್ ನಂಬರಿಗೆ ಮತ್ತು ಆರೋಪಿಗೆ ಯಾವುದೇ ಸಂಬಂದ ಇಲ್ಲಎಂದರೆ ಸರಿಯಿಲ್ಲ. ಯಾವುದೇ ಚಕ್ಕನ್ನು ನೀಡಬೇಕಾದರೆ ಮುಂಭಗ ಮತ್ತು ಹಿಂಭಾಗದಲ್ಲಿ ಸಹಿ ಹಾಕಬೇಕಾಗುತ್ತದೆ ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅವರು ಒಂದು ಕಡೆ ಮಾತ್ರ ಸಹಿ ಮಾಡಿಕೊಂಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿ ಪಿ 1 ಚಕ್ಕನ್ನು ನಾನು ಕಳ್ಳತನ ಮಾಡಿರುವುದರಿಂದ ಅದಕ್ಕೆ ಎರಡೂ ಕಡೆಗೆ ಸಹಿ ಇಲ್ಲ ಎಂದರೆ ಸರಿಯಿಲ್ಲ. ನಾನು ಮತ್ತು ಮಹೇಂದ್ರ ಕೊಟೆಕ್ ಬ್ಯಾಂಕ್ ನವರು ಸೇರಿ ಆರೋಪಿಗೆ ತೊಂದರೆ ಕೊಡುವ ಉದ್ದೇಶ ದಿಂದ 40 ದಿನಗಳನಂತರ ನಿ ಪಿ 2 ನ್ನು ಸೃಷ್ಟ ಮಾಡಿದ್ದೆವು ಎಂದರೆ ಸರಿಯಿಲ್ಲ. ಲೀಗಲ್ ನೋಟಿಸನ್ನು ಕಳುಹಿಸಿದ ದಿನಾಂಕ ನೆನಪಿಲ್ಲ. ಅಂಚೆ ರಶೀದಿಯಲ್ಲಿ ಸದಾಶಿವ ಕುಮರ್ ಮದಕಲ್ ಇದೆ ಎಂದರೆ ಸಾಕ್ಷಿಯು ಅದೇ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸತೀಶ್ ಕುಮಾರ್ ರವರು ಕುರುಕುಂಟಾ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ನಾನು ಕಳುಹಿವುಸಿದ ಲೀಗಲ್ ನೋಟೀಸು ಒಂದು ವೇಳೆ ಆರೋಪಿಗೆ ಮುಟ್ಟಿದ್ದರೆ ಅವರು ಆಗಲೇ ರಿಪ್ಲೈ ಕೊಡುತ್ತಿದ್ದರು ಆದರೆ ಅವರಿಗೆ ಉದ್ದೇಶ ಪೂರ್ವಕವಾಗಿ ಬೇರೆಯವರ ಹೆಸರಿನಲ್ಲಿ ಲೀಗಲ್ ನೋಟಿಸನ್ನು  ಕಳುಹಿಸಿದ್ದೇನೆ ಎಂದರೆ ಸರಿಯಿಲ್ಲ. ನಿ ಪಿ 3 ರಲ್ಲಿ ರೂ.9,95,000/- ಕೈ ಸಾಲ ನೀಡಿರುವ ಬಗ್ಗೆ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಿಲ್ಲ. ನಿ ಪಿ 3 ಲೀಗಲ್ ನೋಟೀಸಿನಲ್ಲಿ ರೂ.4,95,000/- ನಗದು ಸ್ವರೂಪದಲ್ಲಿ ಮತ್ತು ರೂ.5,00,000/- ಚಕ್ಕು ಮುಖಾಂತರ ಕೊಟ್ಟಿರುವ ಬಗ್ಗೆ ಬರೆಸಿದ್ದೇನೆ ಎಂದರೆ ಸರಿ. ನಾನು ಆರೋಪಿಗೆ ರೂ.5,00,000/- ಮೊತ್ತದ ಚಕ್ಕನ್ನು ಎಸ್ ಬಿ ಐ ಕುರುಕುಂಟಾ ಶಾಖೆಯ ಚಕ್ಕನ್ನು ನೀಡಿರುತ್ತೇನೆ. ರೂ.5,00,000/- ಗಳಲ್ಲಿ ರೂ. 3,00,000/- ಒಂದು ಭಾರಿ ಹಾಗೂ ರೂ.2,00,000/- ಇನೊಂದು ಭಾರಿಗೆ ಕೊಟ್ಟಿರುತ್ತೇನೆ. ನನಗೆ ಚಕ್ಕಿನ ದಿನಾಂಕ ನೆನಪಿಲ್ಲ ಆದರೆ ಸನ್ 2022 ರಲ್ಲಿ ನೀಡಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದು ವರೆದು ಎರಡೂ ಚಕ್ಕು ನಡುವೆ 20 ದಿವಸಗಳ ಅಂತರ ಇರುತ್ತದೆ ಎಂದು ನುಡಿಯುತ್ತಾರೆ. ಚಕ್ಕು ನಂಬರು ಗೊತ್ತಿಲ್ಲ. ನಾನು ಚಕ್ಕು ನೀಡಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿಯ  ಗಣಿ ವ್ಯವಹಾರದಲ್ಲಿ ಇರುವ ಹಣವನ್ನು ಚಕ್ಕಿನಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿಯಿಲ್ಲ. ಆರೋಪಿತನು ನನ್ನ ಮನೆಗೆ ಬಂದು ಕೈಸಾಲವನ್ನು ನನಗೆ ದಿನಾಂಕ 26-05-2023 ರಂದು ಕೇಳಿದರು. ನಾನು ಹಣವನ್ನು ಕೊಡುವ ಸಮಯದಲ್ಲಿ ನನ್ನ ತಾಯಿ ಮತ್ತು ಹೆಂಡತಿ ಹಾಜರಿದ್ದರು.

ನನಗೆ ಮುಂದಿನ ದಿನಾಂಕದ ಚಕ್ಕು ನೀಡಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಿ ಪಿ 1 ರಲ್ಲಿರುವ ಕೈಬರಹಗೆ ಮತ್ತು ಆರೋಪಿಯ ಸಹಿಗೆ ಹೊಂದಾಣಿಕೆ ಆಗುತ್ತಿಲ್ಲ ಎಂದರೆ ಸರಿಯಿಲ್ಲ. ನಾನು ಆರೋಪಿಯ ವಿರುದ್ದ ಪ್ರಕರಣವನ್ನು ದಾಖಲಿಸಲು ಬೇರೆ ವಿಳಾಸಕ್ಕೆ ನೋಟೀಸನ್ನು ಕಳುಹಿಸಿರುತ್ತೇನೆ ಎಂದರೆ ಸರಿಯಿಲ್ಲ. ಆರೋಪಿತನು ನನಗೆ ಯಾವುದೇರೀತಿಯ ಚಕ್ಕು ನೀಡಿಲ್ಲ ನಾನು ಆತನ ಮೇಲೆ ದ್ವೇಷವನ್ನು ಸಾಧಿಸಲು ಸುಳ್ಳು ಪಿರ್ಯಾದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಗೆ ಒಂದು ಬಿಲ್ಲು ಬುಕ್ಕನ್ನು ತೋರಿಸಲಾಗಿ ಅದರಲ್ಲಿರುವ ಮೊಟಾಮಾಲನ್ನು ಪಡೆದುಕೊಂಡಿರುವ ಬಗ್ಗೆ ಸೂಚಿಸಿದಾಗ ಆರೋಪಿತರು ಅದನ್ನು ನಿರಾಕರಿಸಿರುತ್ತಾರೆ. ಸದರಿ ಬಿಲ್ಲು ಬುಕ್ಕನ್ನು ನಿ ಡಿ 1 ಎಂದು ಗುರುತಿಸಲಾಯಿತು.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**